ವಿಜಯ ಕರ್ನಾಟಕ

ಅಖಿಲ ಭಾರತ ಅಂತರ್ ವಿವಿ ಈಜು ಚಾಂಪಿಯನ್‌ಷಿಪ್

# ಮೀನಾಕ್ಷಿಗೆ ಮತ್ತೆರಡು ಸ್ವರ್ಣ ಪದಕ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯದ ವಿಕೆಆರ್ ಮೀನಾಕ್ಷಿ ಅಖಿಲ ಭಾರತ ಅಂತರ್ ವಿವಿ ಈಜು ಚಾಂಪಿಯನ್ ಷಿಪ್‌ನಲ್ಲಿ ಬಂಗಾರದ ಬೇಟೆಯನ್ನು ಮುಂದುವರಿಸಿದ್ದು, ಕೂಟದ ಮೂರನೇ ದಿನವು ಎರಡು ಪದಕ ಬಗಲಿಗೆ ಹಾಕಿಕೊಂಡಿದ್ದಾರೆ.



ಕನಕಪುರದ ಜೈನ್ ವಿವಿಯ ಗ್ಲೋಬಲ್ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಮಂಗಳವಾರ ವಿಕೆಆರ್ ಮೀನಾಕ್ಷಿ ಮಹಿಳೆಯರ 50ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ 31.66ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ ಚಿನ್ನ ಗೆದ್ದರೆ, ಮದರಸ ವಿವಿಯ ಎ. ಗುಲ್ನಜ್ ರವೂಫ್ (33.81ಸೆ.) ಮತ್ತು ನಾಸಿಕ್‌ನ ಅನನ್ಯಾ ಪಾಣಿಗ್ರಾಹಿ (34.46ಸೆ.) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಗಳಿಸಿದರು.

100ಮೀ. ಫ್ಲೈ ವಿಭಾಗಗಳಲ್ಲಿ ವಿಕೆಆರ್ ಮೀನಾಕ್ಷಿ 1.06.32 ಸೆಕೆಂಡ್‌ಗಳಲ್ಲಿ ಅಗ್ರ ಸ್ಥಾನಗಳಿಸುವುದರೊಂದಿಗೆ ಮತ್ತೊಂದು ಸ್ವರ್ಣ ಪದಕಕ್ಕೆ ಕೊರಳೊಡ್ಡಿದರು. ಡೆಲ್ಲಿ ವಿವಿಯ ದಿವ್ಯಾ ಸತಿಜಾ (1.09.18) ಮತ್ತು ಬೆಂಗಳೂರಿನ ಆರ್‌ಜಿಯುಎಚ್‌ಎಸ್ ವಿವಿಯ ಟಿ.ಸ್ನೇಹಾ (1.10.04ಸೆ.) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡು ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಪುರುಷರ 50ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಎಂ.ಅರವಿಂದ್ 27.90 ಸೆಕೆಂಡ್‌ಗಳಲ್ಲಿ ಮೊದಲಿಗರಾಗಿ ಗುರಿ ತಲುಪುವ ಮೂಲಕ ಬಂಗಾರ ಗೆದ್ದರು. ಪುರುಷರ 4–200ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಬೆಳಗಾವಿಯ ವಿಟಿಯು 8.44.23 ಸೆಕೆಂಡ್‌ಗಳಲ್ಲಿ ಮೊದಲ ಸ್ಥಾನ ಪಡೆದು ಚಿನ್ನಕ್ಕೆ ಕೊರಳೊಡ್ಡಿದರೆ, ಕೇರಳ ವಿವಿ (8.51.84ಸೆ.) ಮತ್ತು ಪಂಜಾಬ್ ವಿವಿ (8.52.86ಸೆ.) ಕ್ರಮವಾಗಿ ಉಳಿದೆರಡು ಸ್ಥಾನ ಅಲಂಕರಿಸಿದವು.